Reg. No. | | | | | | | | | |

# BSCKAL 253/FNDKAL 253/HRDKAL 253

ಗುಣಾಂಕ ಆಧಾರಿತ ನಾಲ್ಕನೇ ಸೆಮಿಸ್ಟರ್ ಬಿ.ಎಸ್ಸಿ./ಬಿ.ಎಸ್ಸಿ (ಎಫ್.ಎನ್.ಡಿ.) ಬಿ.ಎ.(ಎಚ್.ಆರ್.ಡಿ.)
ಪರೀಕ್ಷೆ, ಎಪ್ರಿಲ್/ಮೇ 2015
ಕನ್ನಡ ಭಾಷೆ
**(2014-15 Batch Onwards)**

Time : 3 Hours  Max. Marks : 80

ಭಾಗ – 1

ಕಾವ್ಯ

Shri Dharmasthala Manjunatheshwara
College of Business Management Library
MANGALORE - 575 003

I. ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

1) ಗೆಳತಿ ಉಷೆಯನ್ನು ಸಂತೈಸಿ ಅವಳ ಇನಿಯನನ್ನು ಹುಡುಕಲು ನಡೆಸಿದ ಪ್ರಯತ್ನ ಕಾವ್ಯ ಭಾಗದಲ್ಲಿ ಹೇಗೆ ನಿರೂಪಿತವಾಗಿದೆ ? ವಿವರಿಸಿ.

2) ಏಸುವಿನ ಬದುಕಿನ ಕೊನೆಯ ಭಾಗ ಗೊಲ್ಗೊಥಾದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×5=5)**

1) 'ಕುಂಬಾರಕಿ ಈಕಿ ಕುಂಬಾರಕಿ' ಕವನದ ಆಶಯವೇನು ? ವಿವೇಚಿಸಿ.

2) ಗಾರ್ಮೆಂಟ್ ಹುಡುಗಿಯ ಬದುಕಿನ ಬವಣೆ ಕವನದಲ್ಲಿ ಹೇಗೆ ನಿರೂಪಿತವಾಗಿದೆ ? ವಿವೇಚಿಸಿ.

ಇ) **ಒಂದು** ಪ್ರಶ್ನೆಗೆ ಟಿಪ್ಪಣಿ ಬರೆಯಿರಿ : **(1×3=3)**

1) ಮಹಿಷಾಸುರ  2) ಜಿ.ಎಸ್.ಶಿವರುದ್ರಪ್ಪ

II. ಅ) **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಕಾವ್ಯ ಸಂದರ್ಭದಲ್ಲಿ ಆ ಭಾಗದ ಮಹತ್ವ ವಿವೇಚಿಸಿ. **(1×4=4)**

1) ಗಿರಿಯ ಶಿರದಲಿ ಹೂತ ಕಕ್ಕೆಯ
ಮರ ಮುರಿದು ಬೀಳ್ವಂತೆ ವಿಮಳಾ
ಭರಣ ಕಾಂತಿಯ ಕಡಲ ಕೋಮಲ ಕಾಯ ಭಗದತ್ತ
ಉರುಳಿದನು ಗಜದಿಂದ ಕುರುಬಲ
ಸರಿಯೆ ಸುರಕುಲ ಕುಸುಮ ವೃಷ್ಟಿಯ
ಸುರಿಯೆ ರಿಪುಸೇನೆಯಲಿ ಹರುಷದ ಹೊನಲು ಬಿರುವರಿಯೆ

2) ಒಡಕಿನಿಂದ ಸತ್ತುದಯ್ಯಾ ನಮ್ಮ ಜನ ಯಾವಾಗಲೂ
ಒಡಕಿನಿಂದ ಅತ್ತುದಯ್ಯಾ ನಮ್ಮ ಜನ ಯಾವಾಗಲೂ
ಒಕ್ಕಟ್ಟಾಗಲು ನಮ್ಮ ಪೀಡೆಯು ಒಂದೂ ಉಳಿಯಲ್ಲೊ ಕೇಳಿರೋ
ನಮ್ಮ ಬದುಕಿಗೆ ನಾವೇ ಕಾರಣ ನಾಯಿ ಬದುಕು ದೂಡಿರೋ

ಪು.ತಿ.ನೋ.

ಆ) ಎರಡು ಸಾಲಿನ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿ. (2×3=6)

1) ಅರುವ ಎಂಬ ಬೆಂಕಿಯ ಹಚ್ಚಿ

2) ತಂದೆಯೆ ! ಮಮಾತ್ಮವಂ ನಿನ್ನ ಕೈಗೊಪ್ಪಿಸುವೆ

3) ನೆಲಕ್ಕೆ ಹಸಿರು ಮೂಡೀತು ಹೇಗೆ ?

III. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿ. (4×1=4)

1) ಕುಮಾರವ್ಯಾಸನ ಆರಾಧ್ಯ ದೈವ ಯಾರು ?

2) ಪ್ರದ್ಯುಮ್ನ ಯಾರ ಮಗ ?

3) ಹೆಬ್ಬೆರಳು ನಾಟಕದ ಕರ್ತೃ ಯಾರು ?

4) ಡಾ। ಸಬಿತಾ ಬನ್ನಾಡಿ ಯಾವ ಜಿಲ್ಲೆಯವರು ?

## ಭಾಗ -2

## ಗದ್ಯ

IV. ಅ) **ಒಂದು** ಪ್ರಶ್ನೆಗೆ ಉತ್ತರಿಸಿ : (1×8=8)

1) ಮಾತಿನ ಮಲ್ಲಿ ಪ್ರಬಂಧದಲ್ಲಿ ರಮೆಯ ಬಾಲ್ಯದ ಮುಗ್ಧ ಕುತೂಹಲವನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ? ವಿವೇಚಿಸಿ.

2) ಆಧುನಿಕ ತಂತ್ರಜ್ಞಾನ ಕ್ಷೇತ್ರವು ಕ್ಷಿಪ್ರಗತಿಯಲ್ಲಿ ಬದಲಾಗುತ್ತಿರುವ ಅಂಶವನ್ನು ಪ್ರಬಂಧ ಹೇಗೆ ನಿರೂಪಿಸಿದೆ ? ವಿವರಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ : (1×5=5)

1) ಗೌತಮನು ಸತ್ಯಶೋಧನೆಯಲ್ಲಿ ಮೊದಲು ಅನುಸರಿಸಿದ ಮಾರ್ಗವನ್ನೂ ಅದರ ಪರಿಣಾಮವನ್ನೂ ವಿವರಿಸಿ.

2) ದೋಸೆ ತಯಾರಿಸುವಲ್ಲಿ ಅಡಗಿರುವ ವೈಜ್ಞಾನಿಕ ತತ್ವಗಳಾವುವು ? ವಿವರಿಸಿ.

ಇ) **ಒಂದು** ಪ್ರಶ್ನೆಗೆ ಟಿಪ್ಪಣಿ ಬರೆಯಿರಿ : (1×3=3)

1) ಮಹಿಳಾ ಮೀಸಲಾತಿಯ ಅಗತ್ಯ

2) ನಾಗೇಶ ಹೆಗಡೆ.

V. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿ : (4×1=4)

1) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಹಾ. ಮಾ. ನಾಯಕರ ಕೃತಿ ಯಾವುದು ?

2) ಪಿ. ಲಂಕೇಶರ ಆತ್ಮ ಕಥನದ ಹೆಸರೇನು ?

3) ಜೆ. ಆರ್. ಲಕ್ಷ್ಮಣ ರಾವ್ ಇದರ ವಿಸ್ತೃತ ರೂಪ ತಿಳಿಸಿ.

4) ಡಾ। ಅನುಪಮಾ ಮೂಲತಃ ಯಾವ ಜಿಲ್ಲೆಯವರು ?

## ಭಾಗ - 3

### ಕ್ರಿಯಾತ್ಮಕ ಕನ್ನಡ

VI. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **(2×4=8)**

1) ಕರ್ನಾಟಕದಲ್ಲಿ ದೂರದರ್ಶನ ಬೆಳೆದು ಬಂದ ಬಗೆಯನ್ನು ತಿಳಿಸಿ.

2) ಅಂತರ್ಜಾಲದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

3) ಭಾರತದಲ್ಲಿ ಆಕಾಶವಾಣಿ ಪ್ರಸಾರ ಹೇಗೆ ವಿಸ್ತೃತಗೊಂಡಿತು ತಿಳಿಸಿ.

VII. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿ : **(2×1=2)**

1) ಕನ್ನಡದ ಮೊದಲ ಆಕಾಶವಾಣಿ ಕೇಂದ್ರ ಯಾವುದು ?

2) ಸ್ಪೆಷಲ್ ಥಿಯರಿ ಆಫ್ ರಿಲೇಟಿವಿಟಿ ಕಂಡು ಹಿಡಿದ ವಿಜ್ಞಾನಿ ಯಾರು ?

## ಭಾಗ - 4

### ಮಹಾಕಾವ್ಯ

VIII. ಅ) **ಒಂದು** ಪ್ರಶ್ನೆಗೆ ಉತ್ತರಿಸಿ : **(1×8=8)**

1) ವನವಾಸಕ್ಕೆ ಹೊರಟುನಿಂತ ಶ್ರೀರಾಮ ಕೌಸಲ್ಯೆಯನ್ನು ಸಮಾಧಾನ ಪಡಿಸಿದ ಸಂದರ್ಭ ಕಾವ್ಯಭಾಗದಲ್ಲಿ ಹೇಗೆ ಮೂಡಿ ಬಂದಿದೆ ?

2) ಸೀತೆಯ ದುಃಖಕ್ಕಿಂತ ಊರ್ಮಿಳೆಯ ದುಃಖ ಹೆಚ್ಚು ತೀವ್ರವಾದುದು ಹೇಗೆ ? ಕಾವ್ಯಭಾಗದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

ಆ) **ಎರಡು** ಪ್ರಶ್ನೆಗೆ ಟಿಪ್ಪಣಿ ಬರೆಯಿರಿ : **(2×4=8)**

Shri Dharmasthala Manjunatheshwara
College of Business Management Library
MANGALORE - 575 003

1) ಸೀತಾರಾಮರ ಸಂವಾದ

2) ಕುಪಿತ ಲಕ್ಷ್ಮಣನ ಮಾತುಗಳು

3) ಗುಹ

IX. ಪ್ರತಿಯೊಂದಕ್ಕೂ **ಒಂದು** ವಾಕ್ಯದಲ್ಲಿ ಉತ್ತರಿಸಿ : **(4×1=4)**

1) 'ಊರ್ಮಿಳಾ' ಪದ್ಯಭಾಗವನ್ನು ಯಾವ ಮಹಾಕಾವ್ಯದಿಂದ ಆರಿಸಲಾಗಿದೆ ?

2) ಅಹಲ್ಯೆ ಯಾರ ಪತ್ನಿ ?

3) ದಶರಥನ ಮಂತ್ರಿ ಯಾರು ?

4) ಊರ್ಮಿಳೆ ಯಾವ ನದಿ ದಂಡೆಯಲ್ಲಿ ಪರ್ಣಕುಟಿ ನಿರ್ಮಾಣ ಮಾಡಿದಳು ?

---